# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಶಶಿಧರಸಂಗ ಶೆಟ್ಟಿ ಕೋಸಂಬೆ, ಅಧ್ಯಕ್ಷರು, ಕೋಣ ಮೇಲಕುಂದ ಗ್ರಾಮ ಪಂಚಾಯತಿ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ, ಇವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 48(4) ಮತ್ತು 43-ಎ ರನ್ವಯ ಕ್ರಮ ಜರುಗಿಸುವ ಬಗ್ಗೆ.

ಓದಲಾಗಿದೆ:

1. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಅಸ.ಪ.ಸಂಖ್ಯೆ: Compt/Uplok/GLB-1454/2016/DRE-3 ದಿನಾಂಕ:30-03-2017.
2. ಸರ್ಕಾರದ ಇದೇ ಸಮಸಂಖ್ಯೆಯ ದಿನಾಂಕ:03-05-2017ರ ಕಾರಣ ಕೇಳುವ ನೋಟೀಸು.
3. ಶ್ರೀ ಶಶಿಧರಸಂಗ ಶೆಟ್ಟಿ ಕೋಸಂಬೆ, ಅಧ್ಯಕ್ಷರು, ಕೋಣ ಮೇಲಕುಂದ ಗ್ರಾಮ ಪಂಚಾಯತಿ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ, ಇವರ ದಿನಾಂಕ:23-05-2017 ಮತ್ತು 24-07-2017ರ ಲಿಖಿತ ಹೇಳಿಕೆಗಳು.
4. ಸಮಸಂಖ್ಯೆಯ ವಿಚಾರಣೆಗೆ ಹಾಜರಾಗಲು ತಿಳುವಳಿಕೆ ಪತ್ರ, ದಿನಾಂಕ 13-07-2017.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಭಾಲ್ಕಿ ರವರ ಅಧಿಕೃತ ಜ್ಞಾಪನ ಪತ್ರ ದಿನಾಂಕ:04-01-2016.
6. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಭಾಲ್ಕಿ ರವರ ಪತ್ರ ಸಂಖ್ಯೆ:ತಾಪಂಭಾ/ಗ್ರಾಪಂ/ಸಿಬ್ಬಂದಿ /2016-17/1867 ದಿನಾಂಕ:27-07-2017.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ದಿನಾಂಕ:30-03-2017ರ ನಿಬಂಧಕರು, ಕರ್ನಾಟಕ ಲೋಕಾಯುಕ್ತ ರವರ ಅರೆ ಸರ್ಕಾರಿ ಪತ್ರದಲ್ಲಿ ಮಾನ್ಯ ಉಪಲೋಕಾಯುಕ್ತ-1ರವರು ದಿನಾಂಕ:22-03-2017 ರಂದು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರನ್ವಯ ಸಲ್ಲಿಸಿರುವ ವರದಿಯಲ್ಲಿ ಶ್ರೀ ದಿಲೀಪ್ ಕುಮಾರ್ ಬಿನ್ ರಾಮಣ್ಣ ಜೀವದಾರ್, ಕೋಣ ಮೇಲಕುಂದ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ, ರವರು ಶ್ರೀ ಶಶಿಧರಸಂಗ ಶೆಟ್ಟಿ ಕೋಸಂಬೆ, ಅಧ್ಯಕ್ಷರು, ಕೋಣ ಮೇಲಕುಂದ ಗ್ರಾಮ ಪಂಚಾಯತಿ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ, ಇವರ ವಿರುದ್ಧ ಸಲ್ಲಿಸಿದ ದೂರಿನ ಅನುಸಾರವಾಗಿ ಲೋಕಾಯುಕ್ತ ಸಂಸ್ಥೆಯು ನಡೆಸಿದ ತನಿಖೆಯಲ್ಲಿ ಈ ಕೆಳಕಂಡ ಆಪಾದನೆಗಳು ಸಾಬೀತಾಗಿರುತ್ತವೆಂದು ತಿಳಿಸಿರುತ್ತಾರೆ.

"ಕೋಣ ಮೇಲಕುಂದ ಗ್ರಾಮ ಪಂಚಾಯತಿಗೆ 2015-16ನೇ ಸಾಲಿನ 14ನೇ ಹಣಕಾಸಿನ ಯೋಜನೆಯಡಿ ಬಿಡುಗಡೆಯಾದ ರೂ.3.77 ಲಕ್ಷ ಗಳನ್ನು ಕ್ರಿಯಾ ಯೋಜನೆಯಲ್ಲಿ ಅನುಮೋದನೆಯಾದ ಕಾಮಗಾರಿಗಳನ್ನು ಕೈಗೊಳ್ಳದೇ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯದೆ ಕಮಗಾರಿಗಳನ್ನು ಬದಲಾಯಿಸಿ 14ನೇ ಹಣಕಾಸಿನ ಯೋಜನೆಯ ಅನುದಾನವನ್ನು ಖರ್ಚು ಮಾಡಿ ಯೋಜನೆಯ ಮಾರ್ಗಸೂಚಿಗಳು ಪಾಲಿಸದೇ ಹಣದ ದುರುಪಯೋಗ ಹಾಗೂ ಕರ್ತವ್ಯಲೋಪ ಎಸಗಿದ್ದಾರೆ"

2ನೇ ಎದುರುದಾರರು ಅಧ್ಯಕ್ಷರಾಗಿದ್ದು, ಹಣ ದುರುಪಯೋಗಕ್ಕೆ ಜವಾಬ್ದಾರರಾಗಿರುತ್ತಾರೆ. ಅದರಂತೆ 2ನೇ ಎದುರುದಾರರಾದ ಶ್ರೀ ಶಶಿಧರಸಂಗ ಶೆಟ್ಟಿ ಕೋಸಂಬೆ, ಅಧ್ಯಕ್ಷರು, ಕೋಣ ಮೇಲಕುಂದ ಗ್ರಾಮ ಪಂಚಾಯತಿ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ, ಇವರ ವಿರುದ್ಧ ಪಂಚಾಯತ್ ರಾಜ್ ಕಾಯಿದೆಯನ್ವಯ ಸೂಕ್ತ ಕ್ರಮ ಕೈಗೊಳ್ಳುವಂತೆ ಮಾನ್ಯ ಉಪಲೋಕಾಯುಕ್ತ-1ರವರು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ ಶ್ರೀ ಶಶಿಧರಸಂಗ ಶೆಟ್ಟಿ ಕೋಸಂಬೆ, ಅಧ್ಯಕ್ಷರು, ಕೋಣ ಮೇಲಕುಂದ ಗ್ರಾಮ ಪಂಚಾಯತಿ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ, 03-05-2017 ರಂದು ಕಾರಣ ಕೇಳುವ ನೋಟೀಸ್ ಜಾರಿಗೊಳಿಸಲಾಗಿದ್ದು, ಸದರಿ ಕಾರಣ ಕೇಳುವ ನೋಟೀಸಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ(3)ರಲ್ಲಿ ಲಿಖಿತ ಹೇಳಿಕೆ ನೀಡಿ, "2015-16ನೇ ಸಾಲಿನ 14ನೇ ಹಣಕಾಸಿನ ಯೋಜನೆಗೆ ಸರ್ಕಾರದಿಂದ 11-08-2015 ರಂದು ರೂ. 3,77,653/-ಗಳು ಅನುದಾನ ಬಂದಿರುತ್ತದೆ ಮತ್ತು ಕೇವಲ ರೂ.3,77,450/-ಗಳನ್ನು ಮಾತ್ರ ಕಾರ್ಯನಿರ್ವಾಹಕ

ಅಧಿಕಾರಿಗಳು, ತಾಲ್ಲೂಕ ಪಂಚಾಯತಿ ಭಾಲ್ಕಿರವರ ಜ್ಞಾಪನಾ ಸಂಖ್ಯೆ: ತಾಪಂಭಾ/ಗ್ರಾಪಂ/ಕು.ನಿ/2015-16/385 ದಿ.04-01-2016 ರಂತೆ ನೀರಿನ ಸರಬರಾಜಿಗೆ ಬಳಸಿಕೊಳ್ಳಲಾಯಿತು ವಿನಃಹ ಯಾವುದೇ ರೀತಿಯಿಂದ ದುರುಪಯೋಗ ಮಾಡಿಕೊಂಡಿರುವುದಿಲ್ಲ. 14ನೇ ಹಣಕಸಿನ ಯೋಜನೆಗೆಯಲ್ಲಿ 1ಲಕ್ಷ ರೂ ನೀರಿನ ಸರಬರಾಜಿಗೆ ಅನುಮೋದನೆಯಾಗಿರುವುದು ಸತ್ಯವಾಗಿರುತ್ತದೆ ಆದರೇ ಹಿಂದಿನ ಎರಡು ವರ್ಷಗಳಿಂದ ಬೀದರ ಜಿಲ್ಲೆಯಲ್ಲಿ ಭೀಕರ ಬರಗಾಲದ ಕಾರಣ ಕಳೆದ ವರ್ಷ ಅಂದರೆ 2015-16ನೇ ಸಾಲಿನಲ್ಲಿ ಸಾರ್ವಜನಿಕರಿಗೆ ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿನ ಅಭಾವ ಸೃಷ್ಟಿಯಾದರೆ ಲಭ್ಯವಿರುವ ಅನುದಾನವನ್ನು ಸರ್ಕಾರದ ಆದೇಶದಂತೆ, ತುರ್ತು ಸಭೆಗಳಲ್ಲಿ, ಕೆಡಿಪಿ ಸಭೆಗಳಲ್ಲಿ, ಜಿ.ಪಂ. ಹಾಗೂ ತಾ.ಪಂ.ಗಳ ಸಾಮಾನ್ಯ ಸಭೆಗಳಲ್ಲಿ ಭಾಲ್ಕಿ ತಹಸಿಲ್ದಾರ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾ.ಪಂ. ಭಾಲ್ಕಿ, ಮಾನ್ಯ ಜಿಲ್ಲಾಧಿಕಾರಿಗಳು ಬೀದರ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿ.ಪಂ. ಬೀದರ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಸಭೆಗಳಲ್ಲಿ ಕುಡಿಯುವ ನೀರಿನ ಸರಬರಾಜಿಗಾಗಿ ಸಂಬಂಧ ಪಟ್ಟ ಸಾಮಾಗ್ರಿಗಳ ಖರೀದಿ ಮತ್ತು ನಿರ್ವಹಣೆಗಾಗಿ ಗ್ರಾ.ಪಂ.ಯ ಯವುದೇ ಯೋಜನೆ ಮತ್ತು ಯಾವುದೇ ಖಾತೆಯ ಅನುದಾನವನ್ನು ಬಳಸಿಕೊಂಡು ನೀರಿನ ಸಮಸ್ಯೆ ಪರಿಹರಿಸುವಂತೆ ಆದೇಶಿಸಿದರು. ಅದರಂತೆ ಅನುಮೋದನೆಯಾದ ಕ್ರಿಯಾ ಯೋಜನೆಯಲ್ಲಿನ ಕಾಮಗಾರಿಗಳ ಬದಲಾಗಿ ನೀರಿನ ಸರಬರಾಜಿಗೆ ಬಳಸಿಕೊಳ್ಳಲಾಯಿತು ವಿನಃಹ ಯಾವುದೇ ರೀತಿಯಿಂದ ದುರುಪಯೋಗ ಮಾಡಿಕೊಂಡಿರುವುದಿಲ್ಲ.

ಕೊಣಮೇಳಕುಂದ ಗ್ರಾಮದ ವಾರ್ಡ್-2 ರಲ್ಲಿ ಮತ್ತು ಅಹಮದಾಬಾದ ಗ್ರಾಮದ ವಾರ್ಡ್-1ರಲ್ಲಿ ಕೇವಲ ರೂ.15600/-ಗಳು ನಿಯಮದಂತೆ ಬಳಸಲಾಗಿದೆ, ಇದರಲ್ಲಿಯೂ ಸಹ ಯಾವುದೇ ರೀತಿಯಿಂದ ಹಣದ ದುರುಪಯೋಗವಾಗಿರುವುದಿಲ್ಲ ಹಾಗೂ ಭಾವಚಿತ್ರಗಳು ಕಡತದಲ್ಲಿ ಇವೆ ಎಂದು ಸದರಿಯವರು ತಮ್ಮ ಹೇಳಿಕೆಯಲ್ಲಿ ತಿಳಿಸಿರುತ್ತಾರೆ.

ಮೇಲೆ ಓದಲಾದ (4) ರನ್ವಯ ಶ್ರೀ ಶಶಿಧರಸಂಗ ಶೆಟ್ಟಿ ಕೋಸಂಬೆ, ಅಧ್ಯಕ್ಷರು, ಕೋಣ ಮೇಲಕುಂದ ಗ್ರಾಮ ಪಂಚಾಯತಿ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ, ಇವರನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರ ನ್ಯಾಯಾಲಯದಲ್ಲಿ ದಿನಾಂಕ 24.07.2017 ರಂದು ಜರುಗಿದ ವಿಚಾರಣೆಯಲ್ಲಿ ಆಪಾದಿತ ಅಧ್ಯಕ್ಷರು, ಕಾರ್ಯನಿರ್ವಾಹಕಾಧಿಕಾರಿ, ತಾಲ್ಲೂಕು ಪಂಚಾಯಿತಿ ಭಾಲ್ಕಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕೋಣ ಮೇಲಕುಂದ ಗ್ರಾಮ ಪಂಚಾಯತಿ, ಹಾಜರಿದ್ದರು. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕ ಪಂಚಾಯತಿ ಭಾಲ್ಕಿರವರ ಜ್ಞಾಪನಾ ಸಂಖ್ಯೆ: ತಾಪಂಭಾ/ಗ್ರಾಪಂ/ಕು.ನಿ/2015-16/385 ದಿ.04-01-2016 ರಂತೆ 14ನೇ ಹಣಕಾಸಿನ ಯೋಜನೆಯ ಅನದಾನವನ್ನು ಕುಡಿಯುವ ನೀರಿನ ಸರಬರಾಜಿಗೆ ಬಳಸಿಕೊಳ್ಳಲಾಯಿತು ವಿನಃಹ ಯಾವುದೇ ರೀತಿಯಿಂದ ದುರುಪಯೋಗ ಮಾಡಿಕೊಂಡಿರುವುದಿಲ್ಲವೆಂದು ಶ್ರೀ ಶಶಿಧರಸಂಗ ಶೆಟ್ಟಿ ಕೋಸಂಬೆ, ಅಧ್ಯಕ್ಷರು, ಕೋಣ ಮೇಲಕುಂದ ಗ್ರಾಮ ಪಂಚಾಯತಿ, ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. "ಬೀದರ ಜಿಲ್ಲೆಯಲ್ಲಿ ಸತತವಾಗಿ ಕಳೆದ ಎರಡು ವರ್ಷಗಳಿಂದ ಅತೀ ಕಡಿಮೆ ಮಳೆ ಆಗಿರುವ ಕಾರಣ ಭೀಕರ ಬರಗಾಲ ಬಂದಿರುತ್ತದೆ. ಈ ಕಾರಣದಿಂದ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆಯು ಅತಿ ಹೆಚ್ಚು ಆಗಿರುವುದರಿಂದ ತಮ್ಮ ಗ್ರಾಮ ಪಂಚಾಯತಿಯಲ್ಲಿನ 14 ನೇ ಹಣಕಾಸು ಯೋಜನೆಯ ಉಳಿತಾಯ ಖಾತೆಯಲ್ಲಿರುವ ಬಳಕೆಯಾಗದ ಅನುದಾನವನ್ನು ಕುಡಿಯುವ ನೀರಿನ ನಿರ್ವಹಣೆಗಾಗಿ ಖರ್ಚು ಮಾಡತಕ್ಕದ್ದು" ಎಂದು ಮೇಲೆ ಓದಲಾದ ಉಲ್ಲೇಖ(5)ರ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕ ಪಂಚಾಯತಿ ಭಾಲ್ಕಿರವರ ಜ್ಞಾಪನಾ ಸಂಖ್ಯೆ: ತಾಪಂಭಾ/ಗ್ರಾಪಂ/ಕು.ನಿ/2015-16/385 ದಿ.04-01-2016 ರನ್ನು ದೃಢೀಕರಿಸಿ ಮೇಲೆ ಓದಲಾದ (6)ರಲ್ಲಿ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಭಾಲ್ಕಿ, ರವರು ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರ ವರದಿ, ಶ್ರೀ ಶಶಿಧರಸಂಗ ಶೆಟ್ಟಿ ಕೋಸಂಬೆ, ಅಧ್ಯಕ್ಷರು, ಕೋಣ ಮೇಲಕುಂದ ಗ್ರಾಮ ಪಂಚಾಯತಿ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ, ಇವರು ನೀಡಿರುವ ಲಿಖಿತ ಹೇಳಿಕೆ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಭಾಲ್ಕಿ ರವರ ವರದಿ ಹಾಗೂ ದಿನಾಂಕ 24.07.2017 ರಂದು ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್) ಇವರ ನ್ಯಾಯಾಲಯದಲ್ಲಿ ನಡೆದ ವಿಚಾರಣಾ ಸಂದರ್ಭದಲ್ಲಿನ ಸಾಕ್ಷ್ಯಾಧಾರ ಹೇಳಿಕೆಗಳನ್ನು ಸರ್ಕಾರವು ಪರಿಶೀಲಿಸಿದ್ದು, ಬರಗಾಲದ ಹಿನ್ನೆಲೆಯಲ್ಲಿ ಕುಡಿಯುವ ನೀರು ಸರಬರಾಜು ಕಾಮಗಾರಿಗಳಿಗೆಅನುದಾನ ಬಳಕೆ ಮಾಡಿಕೊಂಡಿರುವುದರಿಂದ, ಸದರಿಯವರು ಯಾವುದೇ ಹಣ ದುರುಪಯೋಗ ಮಾಡಿರುವುದು ಕಂಡು ಬಂದಿರುವುದಿಲ್ಲ.

ಈ ಹಿನ್ನೆಲೆಯಲ್ಲಿ ಶ್ರೀ ಶಶಿಧರಸಂಗ ಶೆಟ್ಟಿ ಕೋಸಂಬೆ, ಅಧ್ಯಕ್ಷರು, ಕೋಣ ಮೇಲಕುಂದ ಗ್ರಾಮ ಪಂಚಾಯತಿ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ, ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ 1993 ಪ್ರಕರಣ 43(ಎ) ಮತ್ತು 48(4) ರಡಿ ಕ್ರಮ ಜರುಗಿಸಲು ಪ್ರಾರಂಭಿಸಲಾದ ವಿಚಾರಣೆಯನ್ನು ಕೈಬಿಡಲು ಸರ್ಕಾರವು ತೀರ್ಮಾನಿಸಿದೆ.

ಅದರಂತೆ ಈ ಆದೇಶ..

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 286 ಗ್ರಾಪಂಕಾ 2017 ಬೆಂಗಳೂರು, ದಿನಾಂಕ:07.04.2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬೀದರ ಜಿಲ್ಲೆಯಲ್ಲಿ ಸತತವಾಗಿ ಕಳೆದ ಎರಡು ವರ್ಷಗಳಿಂದ ಅತೀ ಕಡಿಮೆ ಮಳೆ ಆಗಿರುವ ಕಾರಣ ಭೀಕರ ಬರಗಾಲದ ಕಾರಣ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆಯು ಅತಿ ಹೆಚ್ಚು ಆಗಿರುವುದರಿಂದ ಗ್ರಾಮ ಪಂಚಾಯತಿಯಲ್ಲಿನ 14 ನೇ ಹಣಕಾಸು ಯೋಜನೆಯ ಉಳಿತಾಯ ಖಾತೆಯಲ್ಲಿರುವ ಬಳಕೆಯಾಗದ ಅನುದಾನವನ್ನು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಭಾಲ್ಕಿ ರವರು ಆದೇಶದ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ನಿರ್ವಹಣೆಗಾಗಿ ಖರ್ಚು ಮಾಡಿರುತ್ತಾರೆ. ಆದುದರಿಂದ ಹಣ ದುರುಪಯೋಗ ಪಡಿಸಿಕೊಂಡಿರುವುದು ಕಂಡುಬಂದಿರದ ಹಿನ್ನೆಲೆಯಲ್ಲಿ ಶ್ರೀ ಶಶಿಧರಸಂಗ ಶೆಟ್ಟಿ ಕೋಸಂಬೆ, ಅಧ್ಯಕ್ಷರು, ಕೋಣ ಮೇಲಕುಂದ ಗ್ರಾಮ ಪಂಚಾಯತಿ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ, ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ 1993 ಪ್ರಕರಣ 43(ಎ) ಮತ್ತು 48(4) ರಡಿ ಪ್ರಾರಂಭಿಸಲಾದ ವಿಚಾರಣೆಯನ್ನು ಕೈಬಿಟ್ಟು, ಮುಕ್ತಾಯಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

9/4

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೀದರ್ ಜಿಲ್ಲೆ.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ಕಾರ್ಯನಿರ್ವಾಹಕಾಧಿಕಾರಿ, ತಾಲ್ಲೂಕು ಪಂಚಾಯಿತಿ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ.
4. ಶ್ರೀ ಶಶಿಧರಸಂಗ ಶೆಟ್ಟಿ ಕೋಸಂಬೆ, ಅಧ್ಯಕ್ಷರು, ಕೋಣ ಮೇಲಕುಂದ ಗ್ರಾಮ ಪಂಚಾಯತಿ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ,
5. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯಿತಿ, ಕೋಣ ಮೇಲಕುಂದ ಗ್ರಾಮ ಪಂಚಾಯಿತಿ, ಔರಾದ ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ.
6. ಗಣಕ ಕೋಶ – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಪ್ರತಿಯನ್ನು ಮಾಹಿತಿಗಾಗಿ:**

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.